೩. ಖಾಸಗಿ ರಂಗ.

ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳು.

೧)	ಇಂಡಿಯ ಶುಗರ್ಸ್, ಹೊಸಪೇಟೆ, ಬಳ್ಳಾರಿ	೨೦೦೦	೮೦೫
೨)	ಉಗಾರಾ ಶುಗರ್ಸ್, ಉಗಾರ್‌ಖುರ್ದ್, ಬೆಳಗಾಂ	೩೫೦೦	೨೦೦೦೦
೩)	ತುಂಗಭದ್ರಾ ಸಕ್ಕರೆ ಕಾರ್ಖಾನೆ, ಶಿವಮೊಗ್ಗ	೨೫೦೦	೩೧೦೦
೪)	ಸೋಮಯ್ಯ ಸಕ್ಕರೆ ಕಾರ್ಖಾನೆ, ಸಮಾರಮಾಡಿ	೫೦೦೦	೪೦೦೦೦
೫)	ಸಿರಗುಪ್ಪ ಶುಗರ್ಸ್, ಸಿರಗುಪ್ಪ, ಬಳ್ಳಾರಿ ಜಿಲ್ಲೆ	೧೫೦೦	೩೫೦೦
೬)	ಶ್ರೀ ಚಾವಲಿಂಡೇಶ್ವರಿ ಶುಗರ್ಸ್, ಕೆ.ಎಂ.ದೊಡ್ಡಿ, ಮಂಡ್ಯ ಜಿಲ್ಲೆ	೨೪೦೦	೧೫೭೧೦

ಕಾರ್ಯ ನಿರ್ವಹಿಸದೇ ಇರುವ ಕಾರ್ಖಾನೆಗಳು.

ಸಾಲಾರ್ ಜಂಗ್ ಸಕ್ಕರೆ ಕಾರ್ಖಾನೆ, ಮುನಿರಾಬಾದ್, ರಾಯಚೂರು ಜಿಲ್ಲೆ ಘಂಟಸಾರಿ ಘಟಕವಾಗಿ ಪರಿವರ್ತಿಸಲಾಗಿದೆ.

೪. ಸಮಾಪನಗೊಂಡಿರುವ ಕಾರ್ಖಾನೆಗಳು.

)	ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆ, ಗೌರಿಬಿದನೂರು, ಕೋಲಾರ ಜಿಲ್ಲೆ.	—	—
೨)	ಶ್ರೀ ಮಹದೇಶ್ವರ —ಡಿಟೋ— ಕೊಳ್ಳೇಗಾಲ, ಮೈಸೂರು ಜಿಲ್ಲೆ	—	—

೫. ಲೇ-ಆಫ್ ಆಗಿರುವ ಕಾರ್ಖಾನೆಗಳು.

೧)	ವಾಣಿ ವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ	—	—

ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ

೮೩೬. ಶ್ರೀ ಸಿ. ಎಂ. ರೇವಣಸಿದ್ಧಯ್ಯ (ಶಿರಗುಪ್ಪ). – ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೀರಾವರಿ ಪಂಪುಸೆಟ್ಟಿಗೆ ರಾಜ್ಯದಲ್ಲಿ ಬಳಕೆಯಾಗುತ್ತಿರುವ ವಿದ್ಯುತ್ ಎಷ್ಟು ?

ಆ) ಒಟ್ಟು ವಿದ್ಯುತ್ತಿನಲ್ಲಿ ಶೇಕಡಾವಾರು ಪ್ರಮಾಣ ಎಷ್ಟು ?

ಇ) ಐ.ಪಿ. ಸೆಟ್ಟಿಗೆ ವಿದ್ಯುತ್ ಸರಬರಾಜಿನಲ್ಲಿ ಖೋತಾ ಮಾಡಿರುವುದರಿಂದ ನಿಂತ ಬೆಳೆದಿ ತೊಂದರೆಯಾಗಿರುವುದು ನಿಜವಲ್ಲವೇ.

ಈ) ಹಾಗಿದ್ದಲ್ಲಿ ಐ.ಪಿ. ಸೆಟ್ಟಿಗೆ ವಿದ್ಯುತ್ ಖೋತಾ ನಿಲ್ಲಿಸಲಾಗುವುದೇ.

ಉ) ವಿದ್ಯುತ್ ದರದಲ್ಲಿ ರಿಯಾಯಿತಿಯನ್ನು ನೀಡಲಾಗುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನಲ್ಲಿ ೧೧೫೭ ತಾತ್ಕಾಲಿಕ ದಶಲಕ್ಷ ಯೂನಿಟ್ಟುಗಳ ಬಳಕೆಯಾಗಿದೆ ಯೆಂದೂ ಅಂದಾಜು ಮಾಡಲಾಗಿದೆ.

ಅ) ಇದು ಒಟ್ಟು ಬಳಕೆಯ ಶೇಕಡಾ ೧೬.೧೮ ಪ್ರಮಾಣವಾಗಿದೆ.

ಇ) ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೋತಾ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಈಗಾಗಲೇ ಹೆಚ್ಚು ರಿಯಾಯಿತಿ ದರ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ವಿದ್ಯುಚ್ಛಕ್ತಿ ಮನ್ನಾ ಮಾಡುವ ಬಗ್ಗೆ

೧೦೧ (ಡಿ) ಶ್ರೀ ಎಂ. ಕೃಷ್ಣಪ್ಪ (ಹೆಗ್ಗಡದೇವನಕೋಟೆ).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ವಿದ್ಯುಚ್ಛಕ್ತಿ ಮನ್ನಾ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ವಿದ್ಯುತ್ ಬಳಕೆಗೆ ಹಣ ಪಾವತಿ ಮಾಡಲಂ ವಿದ್ಯಾರ್ಥಿ ನಿಲಯಗಳಿಗೆ ವಿದ್ಯುತ್ ಮಂಡಳಿಯವರು ಒತ್ತಾಯಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಮುಫತ್ತು ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದೆ. ಆದರೆ ಇವುಗಳು ಬಳಸಿದ ವಿದ್ಯುತ್ತಿನ ಮೊಬಲಗನ್ನು ಸಮಾಜ ಕಲ್ಯಾಣ ಇಲಾಖೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಕೊಡುವ ವ್ಯವಸ್ಥೆ ಇದೆ.

ಆ) ಮತ್ತು ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳ ವಿದ್ಯುತ್ ಬಿಲ್ಲನ್ನು ಆಯಾ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನೀಡುವಂತೆ ಮಂಡಳಿಯ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಇದರ ಬಗ್ಗೆ ಮಂಡಳಿಯು ಇನ್ನೊಂದು ಜ್ಞಾಪನಾ ಪತ್ರವನ್ನೂ ಈಗ ನೀಡಿದೆ ವಿದ್ಯಾರ್ಥಿ ನಿಲಯದವರನ್ನು ಒತ್ತಾಯ ಮಾಡಿದ ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ರೇಷ್ಮೆ ವ್ಯವಸಾಯದ ಅಭಿವೃದ್ಧಿ ಸಲುವಾಗಿ

೧೩೦ ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩-೮೪ ೧೯೮೪-೮೫ ಹಾಗೂ ೧೯೮೫-೮೬ ರಲ್ಲಿ ಧಾರವಾಡ, ವಿಜಾಪುರ ಬೆಳಗಾಂವ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ರೇಷ್ಮೆಯ ವ್ಯವಸಾಯದ ಕ್ಷೇತ್ರ ಅಭಿವೃದ್ಧಿ ಪಡಿಸಲಾಗಿದೆಯೆ ಹಾಗಿದ್ದಲ್ಲಿ ಸದರಿ ಮೂರು ವರ್ಷಗಳ ಪ್ರಗತಿ ತಿಳಿಸುವುದು.

ಆ) ಧಾರವಾಡದ ರಾಯಾಪುರದ ಗ್ರಾಮದ ಹತ್ತಿರ ರೇಷ್ಮೆ ಗೂಡು ಬಿಡಿಸುವ ಕಾರ್ಯಗಾರ ಪ್ರಾರಂಭಿಸಿದ್ದು ಅಲ್ಲಿ ಈಗ ನಡೆದ ಪ್ರತಿ ವರ್ಷದ ಪ್ರಗತಿ ಮುನ್ನಡೆ ಏನು.

ಇ) ರೇಷ್ಮೆ ವ್ಯವಸಾಯ ಅಭಿವೃದ್ಧಿ ಪಡಿಸಲು ಅವಕಾಶವಿರುವ ಈ ಜಿಲ್ಲೆಗಳಲ್ಲಿ ಸರ್ಕಾರ ಯಾವ ಯೋಜನೆಗಳನ್ನು ಹಾಕಿಕೊಂಡಿದೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು).—

ಅ) ಧಾರವಾಡ, ವಿಜಾಪುರ, ಬೆಳಗಾಂವ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ರೇಷ್ಮೆ ವ್ಯವಸಾಯದ ಕ್ಷೇತ್ರ ಅಭಿವೃದ್ಧಿ ಪಡಿಸಲಾಗಿದೆ ಮೂರು ವರ್ಷದ ಪ್ರಗತಿಯ ವಿವರವನ್ನು ಅನುಬಂಧ 'ಅ' ನಲ್ಲಿ ಸೂಚಿಸಿದೆ.